ಓ.ಎಸ್. 146/2020
ಪಿ.ಡಬ್ಲ್ಯೂ-1

ದಿನಾಂಕಃ **18.09.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ವಿ.ಎಸ್.ಕೆ. ವಕೀಲರಿಂದಃ

ನಾನು ಸರ್ವೆ ನಂ. 571/3 ರಲ್ಲಿ 5 ಗುಂಟೆ ಇಡುವಳಿ ಜಮೀನನ್ನು ಖರೀದಿ ಮಾಡಿರುತ್ತೇನೆ. ಸರ್ವೆ ನಂ. 571/3 ರಲ್ಲಿ ನಾನು ಖರಾಬು ಸೇರಿ 5 ಗುಂಟೆ ಖರೀದಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಖರೀದಿ ಮಾಡಿದ ಜಮೀನು ಪೋಡಿಯಾಗಿ 571/3 ಸಿ ಆಗಿರುತ್ತದೆ ಎಂದರೆ ಸರಿ. ನಾನು ಖರೀದಿ ಮಾಡಿದ ಜಮೀನಿನಲ್ಲಿ 2 ಗುಂಟೆಯನ್ನು ಕಾವಲಪ್ಪನವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಕಾವಲಪ್ಪನವರು ಖರೀದಿ ಮಾಡಿದ ಜಮೀನಿಗೆ ಸರ್ವೆನಂ. 571/3 ಸಿ2 ಎಂದು ಸರ್ವೆ ನಂಬರ್ ನೀಡಿರುತ್ತಾರೆ ಎಂದರೆ ಸರಿ.

**2.** ದಾವಾ ಸರ್ವೆ ನಂಬರ್ ಜಮೀನಿಗೆ ಸಂಬಂಧಿಸಿದಂತೆ ಓ.ಎಸ್.ನಂ. 320/1996 ರಂತೆ ದಾವೆಯನ್ನು ಹೂಡಿದೆದನು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂಬರ್‌ನಲ್ಲಿ ಇದ್ದಂತಹ ದಾರಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿದ್ದೆನು. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯಲ್ಲಿ ಪುಟ್ಟ ಸಿದ್ದಪ್ಪ ಮಾಲೀಕ ಎಂದು ನಮೂದು ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಓ.ಎಸ್.ನಂ. 320/1996 ರಲ್ಲಿ ಆದಂತಹ ತೀರ್ಪಿನ ವಿರುದ್ಧ ಆರ್.ಎ. 2/2012 ರಂತೆ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮಾನ್ಯ ಉಚ್ಛ ನ್ಯಾಯಾಲಯಾದಲ್ಲಿ ಆರ್.ಎಸ್.ಎ. 129/2020 ರಂತೆ ವಿಚಾರಣಾ ಹಂತದಲ್ಲಿರುತ್ತದೆ ಎಂದು ಉತ್ತಸಿರುತ್ತಾರೆ. ಆರ್.ಎಸ್.ಎ. 129/2020

ರಂತೆ ಮೇಲ್ಮನವಿ ದಾಖಲಿಸಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

**3.** ದಾವಾ ಸರ್ವೆ ನಂಬರ್ ಪೋಡಿ ಮಾಡಿರುವುದು ಸರಿ ಇರುವುದಿಲ್ಲ ಎಂದು ನಾನು ತಹಶೀಲ್ದಾರ್‌ರವರಿಗೆ ಅರ್ಜಿ ನೀಡಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಗೆ ತಹಶೀಲ್ದಾರ್‌ರವರು ನೀಡಿರುವ ಹಿಂಬರಹದ ವಿರುದ್ಧ ನಾನು ಡಿಡಿಎಲ್‌ಆರ್ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಡಿಡಿಎಲ್‌ಆರ್ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸುವ ಪೂರ್ವದಲ್ಲಿಯೇ ಜೆಡಿಎಲ್‌ಆರ್ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದು ಜೆಡಿಎಲ್‌ಆರ್ ಆದೇಶ ಮಾಡಿರುವ ಕಾರಣ ಡಿಡಿಎಲ್‌ಆರ್ ಕಛೇರಿಯಲ್ಲಿ ನಮ್ಮ ಅಧಿಕಾರ ವ್ಯಾಪ್ತಿ ಮೀರಿ ಆದೇಶವಾಗಿರುತ್ತದೆ ಎಂದು ನಾನು ಸಲ್ಲಿಸಿದಂತಹ ಮೇಲ್ಮನವಿಯನ್ನು ವಜಾ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಆದೇಶವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಡಿಡಿಎಲ್‌ಆರ್‌ರವರು ಮಾಡಿರುವ ಆದೇಶದ ವಿರುದ್ಧ ನಾನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯಲ್ಲಿ ಅಪೀಲ್ ಸಂಖ್ಯೆ 730/2017 ರಂತೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನೀಡಿರುವಂತಹ ದಾಖಲೆಗಳು ನಮ್ಮ ವಕೀಲರು ಮೇಲ್ಮನವಿಯಲ್ಲಿ ಹಾಜರು ಪಡಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**4.** ನಾನು ದಾವಾ ಸರ್ವೆ ನಂಬರ್‌ಗೆ ಸಂಬಂಧಿಸಿದಂತೆ ಆದ ಪೋಡಿಯನ್ನು ಪ್ರಶ್ನಿಸಿ ಹೂಡಿದ್ದಂತಹ ಎಲ್ಲಾ ಅರ್ಜಿಗಳು ಮತ್ತು ಮೇಲ್ಮನವಿಗಳು ವಜಾ ಆಗಿದ್ದರಿಂದ ದಾವಾ ಸ್ವತ್ತನ್ನು

ಹಿರಿಯರ ಸಮಕ್ಷಮ ಪ್ರತಿವಾದಿಗೆ ರೂ. 80,000/- ಕ್ಕೆ ಮಾರಾಟ ಮಾಡಲು ಒಪ್ಪಿ ರೂ.10,000/- ಮುಂಗಡ ಹಣ ಪಡೆದುಕೊಂಡು ದಿ:02.01.2015 ರಂದು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಕರಾರು ಪತ್ರದಂತೆ ಕ್ರಯ ಪತ್ರ ಬರೆದುಕೊಡದ ಕಾರಣ 1 ನೇ ಪ್ರತಿವಾದಿ ಕರಾರು ಪತ್ರದ ಆಧಾರದ ಮೇರೆಗೆ ನನ್ನ ವಿರುದ್ಧ ಓ.ಎಸ್. ನಂ. 137/2015 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ.

**5.** ನಾನು ಈ ದಾವೆಯನ್ನು 3 ಗುಂಟೆ ಇಡುವಳಿ ಜಮೀನು ಮತ್ತು ಖರಾಬು ಜಮೀನಿಗೆ ಸೇರಿದಂತೆ ಹೂಡಿರುತ್ತೇನೆ. ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ಕೊಡದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ